ಬೆಳೆಯುತ್ತೇವೆ. ಅಲ್ಲದೆ, ಕಾಡಿನಲ್ಲಿಯೇ ಸಹಜ ವಾತಾವರಣದಲ್ಲಿ ಬೆಳೆದ ಗಿಡಮೂಲಿಕೆಗಳನ್ನು ಪತ್ತೆ ಮಾಡುವುದು ಕಷ್ಟವೇ. ಅಂತಹುವುಗಳನ್ನೂ ನಾವೇ ಬೆಳೆದುಕೊಳ್ಳಬಹುದು. ಆದರೆ ಉತ್ತಮವಾದ ಬೆಲ್ಲ, ಎಣ್ಣೆ, ಕಾಳುಗಳನ್ನು ಪತ್ತೆ ಮಾಡುವುದು ಒಂದು ಸವಾಲೇ ಸರಿ. ರೋಗಿಗಳಿಗೆ ಕೊಡುವ ಔಷಧ ತಯಾರಕರು ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಲೇಬೇಕು. ನಾವು ವೈದ್ಯರು ರೋಗ ಗುಣವಾಗುವ ರೀತಿಯಲ್ಲಿ ಔಷಧಿ ಕೊಡುವ ಹೊಣೆ ಹೊತ್ತಿರುತ್ತೇವೆ. ಅದಕ್ಕೆ ಬದ್ಧರಾಗಿರಬೇಕು'.



### ಹಳೆ ಪದ್ಧತಿ ಈಗ ಸಾಧ್ಯವಿಲ್ಲ...

ಕೊಟ್ಟೂರು ಬಳಿಯ ನಾಗರಕಟ್ಟೆಯಲ್ಲಿ ನಾವು ಮೆಕ್ಕೆಜೋಳ, ಚೆಂಡುಹೂವು, ತಂಬಾಕು ಬೆಳೆ ಬೆಳೆಯುತ್ತೇವೆ. ರಾಸಾಯನಿಕ ಗೊಬ್ಬರ, ಕಳೆನಾಶಕಗಳಿಲ್ಲದೇ ಈ ಕೃಷಿ ಮಾಡುವುದು ಹೇಗೆ ಸಾಧ್ಯ ಎಂದು ಕೆಲವೊಮ್ಮೆ ಅಚ್ಚರಿಯಾಗುತ್ತಿದೆ. ಯಾಕೆಂದರೆ ಇತ್ತೀಚೆಗೆ ಕೃಷಿ ಪದ್ಧತಿಯು ತಜ್ಞರು ಹೇಳಿದ ಮಾದರಿಯಲ್ಲಿಯೇ ಮಾಡಬೇಕಾಗಿದೆ. ಹಿರಿಯರು ಮಾಡುತ್ತಿದ್ದ ಹಳೇ ಪದ್ಧತಿಯನ್ನು ಅನುಸರಿಸುವುದು ಸಾಧ್ಯವಾಗುತ್ತಿಲ್ಲ. ತಜ್ಞರು ಬಂದು ಕೊಡುವ ಬೀಜವನ್ನೇ ಬಳಸಿ ಕೃಷಿ ಮಾಡಿದ ಮೇಲೆ ಅವರು ಸೂಚಿಸಿದ ಗೊಬ್ಬರವನ್ನೇ ಹಾಕುವುದು ಅನಿವಾರ್ಯ.

**–ಗಾಯತ್ರಿದೇವಿ, ಕೃಷಿಕರು, ನಾಗರಕಟ್ಟೆ, ಕೊಟ್ಟೂರು**

## ಯಾವುದು ನಮ್ಮ ಆದ್ಯತೆ?

ಲಭ್ಯತೆ ಮತ್ತು ಸೌಕರ್ಯಗಳು ಹೆಚ್ಚಾದಂತೆಯೇ ಮನುಷ್ಯನ ಮುಂದಿರುವ ಆಯ್ಕೆಗಳೂ ಹೆಚ್ಚಾಗುತ್ತವೆ. ಆಗ ಮನುಷ್ಯರು ಹೇಗೆ ವರ್ತಿಸುತ್ತಾರೆ ಎನ್ನುವುದು ಕುತೂಹಲಕರ ವಿಷಯ. ಹೆಚ್ಚು ಆಹಾರ ಲಭ್ಯವಿಲ್ಲದೇ ಇದ್ದಾಗ ಜನರು ಆಹಾರ ಸಿಕ್ಕಿದರೆ ಸಾಕಿತ್ತು ಎಂಬ ಹಂಬಲದಲ್ಲಿ ಆಶಯದೊಂದಿಗೆ ಆಹಾರಕ್ಕಾಗಿ ಹುಡುಕಾಟ ಮಾಡುತ್ತಿದ್ದರು. ಯುದ್ಧದ ಸಂದರ್ಭದಲ್ಲಿ, ಆಹಾರ ಕೊರತೆ, ಕ್ಷಾಮದ ಸಂದರ್ಭದಲ್ಲಿ ಹೀಗೆ ಆಹಾರಕ್ಕಾಗಿ ಮನುಷ್ಯರು ಹಾತೊರೆಯುತ್ತಿದ್ದ ಪ್ರಕರಣಗಳನ್ನು ನಾವು ಓದಿ ಬಲ್ಲೆವು. ಹಿರಿಯರು ಹೇಳಿದ್ದನ್ನು ಕೇಳಿ ಬಲ್ಲೆವು. ಆದರೆ ಇಂದು ನಗರಕೇಂದ್ರಿತವಾಗಿರುವ ಬದುಕಿನಲ್ಲಿ ಆಹಾರದ ಲಭ್ಯತೆ ಸಾಕಷ್ಟು ಪ್ರಮಾಣದಲ್ಲಿರುವುದನ್ನು ಕಾಣುತ್ತೇವೆ. ವೈವಿಧ್ಯಗಳು ಹೆಚ್ಚಾಗಿ, ಆಯ್ಕೆಗಳು ಯಥೇಷ್ಟವಾಗಿವೆ. ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಜನರ ಕೈಯಲ್ಲಿ ಹಣದ ಹರಿವು ಇದೆ. ಹಾಗಿದ್ದಾಗ ಜನರ ಮೊದಲ ಆಯ್ಕೆ ಯಾವುದಾಗಿರುತ್ತದೆ? ಒಳ್ಳೆಯ ಆಹಾರವೇ ಮೊದಲ ಆಯ್ಕೆ ಆಗುವುದೇ ಎಂದು ಪ್ರಶ್ನಿಸಿಕೊಂಡರೆ ಹಾಗೇನೂ ಇಲ್ಲ. ದುಡಿಮೆ ಮತ್ತು ಹಣವೇ ಮೊದಲ ಆಯ್ಕೆಯಾಗುತ್ತದೆ. ಇದೊಂದು ವೃತ್ತವಿದ್ದಂತೆ. ಅಂದರೆ, ಸಮಾಜದಲ್ಲಿ ದೊಡ್ಡ ಪ್ರಮಾಣದಲ್ಲಿರುವ ಮಧ್ಯಮ ಮತ್ತು ಕೆಳಮಧ್ಯಮ ವರ್ಗದವರ ಪಾಲಿಗೆ ನಿರಂತರ ದುಡಿಮೆಯಿದ್ದಾಗ ಮಾತ್ರ ಕೈಯಲ್ಲಿ ಹಣದ ಹರಿವು ಇರುತ್ತದೆ. ಈ ನಿರಂತರತೆಯು ಒಂದು ಕ್ಷೇಮಭಾವವನ್ನು ಅವರಲ್ಲಿ ಹುಟ್ಟುಹಾಕುತ್ತದೆ. ಎಲ್ಲರೂ 'ದುಡಿಮೆ' ಎಂಬ ಓಟದ ಬೆನ್ನತ್ತಿದಾಗ, ಆಹಾರದ ಒಳಿತು ಕೆಡುಕಿನ ಬಗ್ಗೆ ನಿಗಾ ವಹಿಸಲು ಸಮಯವೆಲ್ಲಿ ಇರುತ್ತದೆ? ಸಾಮೂಹಿಕವಾಗಿ ಎಲ್ಲರಿಗೂ ಏನು ಲಭ್ಯವೋ ಅದನ್ನೇ ಬಳಸುವುದು ಅನಿವಾರ್ಯವಾಗಿರುತ್ತದೆ. ದೈನಂದಿನ ಕೆಲಸ, ಜಂಜಾಟ ಮತ್ತು ದುಡಿಮೆಯ ನಡುವೆ ಸುರಕ್ಷಿತ ಆಹಾರದ ಹುಡುಕಾಟಕ್ಕೆಂದು ಸಮಯವಿರುವುದಿಲ್ಲ.



ಚೆಲ್ಲಿದರೂ ಮಲ್ಲಿಗೆಯಾ ಎನ್ನುವ ಹಾಡಿನ ವಿಷಾದದ ರೂಪ...

ಜನರ ಬಟ್ಟಲಿಗೆ ಉತ್ತಮ ಆಹಾರ ಲಭ್ಯವಾಗಬೇಕು ಎನ್ನುವುದು ಸರ್ಕಾರದ ಕಾಳಜಿಯೂ ಆಗಿರಬೇಕು. ಕೃಷಿ ಕ್ಷೇತ್ರದಲ್ಲಿ ಬಳಸುವ ರಾಸಾಯನಿಕಗಳ ಪ್ರಮಾಣ ಎಷ್ಟಿರಬೇಕು ಎಂಬುದನ್ನು ರೈತರಿಗೆ ತಿಳಿಸಿಕೊಡುವ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಳ್ಳಬೇಕು. ರೇಡಿಯೊದಲ್ಲಿ ಬರುವ ರೈತರಿಗೆ ಸಲಹೆ, ಕೃಷಿ ವಿಜ್ಞಾನ ಕೇಂದ್ರದ ಪ್ರಕಟಣೆಗಳು ಈ ಮಾಹಿತಿ ನೀಡುವ ಕಾರ್ಯ ಮಾಡುತ್ತವೆಯಾದರೂ, ರೈತರು ಅಂತಿಮವಾಗಿ 'ಎಷ್ಟು ಔಷಧಿ ಹೊಡಿಬೇಕ್ರೀ' ಎಂದು ಔಷಧಿ ಅಂಗಡಿಯವನನ್ನೇ ಪ್ರಶ್ನಿಸುತ್ತಾರೆ. ಅಂಗಡಿಯವನು ಕೊಡುವ ಉತ್ತರದಲ್ಲಿ 'ನನ್ನ ಅಂಗಡಿಗೆ ಒಳ್ಳೆಯ ವ್ಯಾಪಾರವಾಗಬೇಕು' ಎಂಬ ಆಶಯವೇ ಪ್ರಮುಖವಾಗಿ ಇರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ಅನ್ನವನ್ನು ದೇವರು ಎಂದರು ಹಿರಿಯರು. ಅನ್ನಕ್ಕೆ ಮೌಲ್ಯ ಕಟ್ಟುವುದು ಇಂದಿನ ಪದ್ಧತಿ. ವ್ಯಾಪಾರ ಎನ್ನುವುದೇ ದ್ರೋಹಚಿಂತನೆ ಎನ್ನುವ ಮಾತಿದೆ. ಅದರ ಫಲವಾಗಿಯೇ, ತಟ್ಟೆಯಲ್ಲಿನ ಆಹಾರ ವಿಷವಾಗಿದೆ. ಆ ವಿಷ ಕಾಲಕೂಟದಂತೆ ಜಗತ್ತನ್ನೇ ಸುಡುತ್ತಿದೆ. ಅಮೃತಕ್ಕಾಗಿ ಹಂಬಲಿಸುವವರು ಅನ್ನ ಹಾಗೂ ನೈತಿಕತೆಯ ನಡುವೆ ಕಳೆದುಹೋಗಿರುವ ಸಂಬಂಧವನ್ನು ಮರಳಿ ಸ್ಥಾಪಿಸಲು ಪ್ರಯತ್ನಿಸಬೇಕಾಗಿದೆ. ಆ ಪ್ರಯತ್ನ ವೈಯಕ್ತಿಕ ಹಾಗೂ ಸಾಮೂಹಿಕ ನೆಲೆಗಟ್ಟಿನಲ್ಲಿ ನಡೆದು ವ್ಯಾಪಕವಾಗದೆ ಹೋದರೆ, ನಾವೆಲ್ಲ ವಿಷ ಉಣ್ಣುತ್ತಿರಲೇಬೇಕಾಗುತ್ತದೆ.

**ಪ್ರತಿಕ್ರಿಯಿಸಿ: feedback@sudha.co.in**